**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ದೊಡ್ಡಬಳ್ಳಾಪುರ**

**ಓ.ಎಸ್. 146/2021**

**ಪಿ.ಡಬ್ಲ್ಯೂ -3**

| | |
|---|---|
| **ಹೆಸರು** | ಮಂಜುನಾಥ |
| **ತಂದೆಯ ಹೆಸರು** | ನಾಗಪ್ಪ |
| **ವಯಸ್ಸು** | ಸುಮಾರು 46 ವರ್ಷ |
| **ಉದ್ಯೋಗ** | ವ್ಯವಸಾಯ |
| **ವಾಸ ಸ್ಥಳ** | ದೊಡ್ಡಬಳ್ಳಾಪುರ |

**ಸಾಕ್ಷಿಗೆ ದಿನಾಂಕ 17.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಅಂಶಗಳು ನಿಜವಾಗಿದೆ ಮತ್ತು ಸರಿಯಾಗಿದೆ. ಸದರಿ ಪ್ರಮಾಣ ಪತ್ರದಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನಾನು ವಾದಿಯ ಊರಿನವನಾಗಿದ್ದು, ಸುಮಾರು ನನ್ನ ತಂದೆಯ ಕಾಲದಿಂದ ಅಲ್ಲಿಯೆ ಇರುತ್ತೇನೆ. ಸದರಿ ಊರಿನಲ್ಲಿ ನಡೆಯುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ ಎಂದರೆ ಸರಿ. ನಾನು ವ್ಯವಸಾಯ ಮಾಡುತ್ತೇನೆ. ಸಾಕ್ಷ್ಯ ಪ್ರಮಾಣಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ದಾವಾಸ್ವತ್ತು ಸರ್ವೇ ನಂ.65 ರ ಪಶ್ಚಿಮಕ್ಕೆಃ ಕಾಲೋನಿಗಳು ಸ್ವತ್ತಿಗೆ ಅಂಟಿಕೊಂಡು ಇರುತ್ತವೆ, ಅಲ್ಲಿ ಸುಮಾರು 70 ರಿಂದ 80 ಮನೆಗಳು ಇರುತ್ತವೆ. ಪಶ್ಚಿಮದ ಕಡೆ ಕೃಷಿ ಜಮೀನು ಇರುವುದಿಲ್ಲ, ದೂರದಲ್ಲಿ ಇರುತ್ತವೆ. ಪಶ್ಚಿಮದ ಕಡೆ ಯಾವುದೇ ಕೃಷಿ ಜಮೀನು ಇರುವುದಿಲ್ಲವೆಂದರೆ ಸರಿಯಲ್ಲ.

ದಿ.21.03.2021 ರಂದು ಪ್ರತಿವಾದಿಯ ಮಾತ್ರ ಬಂದಿರುತ್ತಾರೆ, ಅವರ ಬಳಿ ಯಾವುದೇ ಇಟ್ಟಿಗೆ, ಮರಳು ಇತ್ಯಾದಿ ಸಾಮಾಗ್ರಿಗಳು ಇರುವುದಿಲ್ಲ. ಸಾಕ್ಷಿಯು ಮುಂದುವರೆದ ಮೊದಲು ಪ್ರತಿವಾದಿ ಬಂದಿರುತ್ತಾರೆ ನಂತರ ಹಲವಾರು ಜನ ಬಂದಿರುತ್ತಾರೆ ಅವರು ಕಲ್ಲು ಕುಚ್ಚ, ತಂತಿ ಇತ್ಯಾದಿಗಳನ್ನು ತಂದಿದ್ದರು. ಸದರಿ ವಿಷಯಗಳು ಸಾಕ್ಷ ಪ್ರಮಾಣಪತ್ರದಲ್ಲಿ ತಿಳಿಸಿರುವುದಿಲ್ಲ. ಸದರಿ ದಿನದಂದು ನಾನು ಹೇಳಿದ ರೀತಿಯಲ್ಲಿ ಯಾವುದೇ ಘಟನೆ ನಡೆದಿರುವುದಿಲ್ಲ. ಸದರಿ ದಿನದಂದು ನಾವು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುವುದಿಲ್ಲವೆಂದರೆ ಸರಿಯಲ್ಲ.

ಬೆಳಗ್ಗೆ 10-30 ರಿಂದ 11-00 ಗಂಟೆಗೆ ಪ್ರತಿವಾದಿ ಬಂದಿರುತ್ತಾರೆ. ಪ್ರತಿವಾದಿಯು ಯಾವಾಗ ಕ್ರಯಕ್ಕೆ ಸ್ವತ್ತನ್ನು ಪಡೆದಿರುತ್ತಾರೆಂದು ಗೊತ್ತಿರುವುದಿಲ್ಲ. 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯಿಂದ ದಿ.19.02.2021 ರಂದು ಖರೀದಿ ಮಾಡುವ 1 ವಾರದ ಮೊದಲೆ ಕಂಪೌಂಡ್ ನ್ನು ಹಾಕಲಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಸಾಕ್ಷ ಪ್ರಮಾಣಪತ್ರದಲ್ಲಿ ತಿಳಿಸಿದಂತೆ ಯಾವುದೇ ಘಟನೆಯು ನಡೆದಿರುವುದಿಲ್ಲ, ವಾದಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**OS No. 146/2021**
**PW.3**

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇಲೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ ಮತ್ತು ಸರಿ ಇದೆ.**

**ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ದೊಡ್ಡಬಳ್ಳಾಪುರ.**